**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ. 3254/2023**

ದಿನಾಂಕ: **23-10-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು : | ತಿಮ್ಮರಾಯಪ್ಪ | ಚಾಸಾ-4, ಪ್ರಾಸ-2 |
| ತಂದೆಯ ಹೆಸರು : | ಸಣ್ಣಹನುಮಂತಪ್ಪ | |
| ವಯಸ್ಸು : | 45 ವರ್ಷ | |
| ಉದ್ಯೋಗ : | ಪೋಲಿಸ್ ಮುಖ್ಯ ಪೇದೆ | |
| ವಾಸ : | ಅಜ್ಜಂಪುರ | |

<u>ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:</u>

ನಾನು 2017 ರಿಂದ 2023 ರವರೆಗೆ ನಾನು ಬೀರೂರು ಠಾಣೆಯಲ್ಲಿ ಪೋಲಿಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿ: 15.03.2023 ರಂದು ನಾನು ಸಂಜೆ 5.30 ಗಂಟೆ ಸಮಯದಲ್ಲಿ ಠಾಣೆಯಲ್ಲಿರುವಾಗ ಚಾಸಾ-1 ರವರಿಗೆ ಹೊಗರೆಹಳ್ಳಿ ಗ್ರಾಮದಲ್ಲಿ ಕಾಂತರಾಜು ರವರು ಅವರ ಮನೆಯ ಮುಂದೆ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿರುತ್ತದೆ. ಈ ವಿಚಾರವನ್ನು ಚಾಸಾ-1 ರವರು ನನಗೆ, ಚಾಸಾ-5 ರಿಂದ 7 ರವರಿಗೆ ತಿಳಿಸಿ ಇಲಾಖಾ ಜೀಪಿನಲ್ಲಿ ನಮ್ಮನ್ನು ಕರೆದುಕೊಂಡು ಹೊಗರೆಹಳ್ಳಿ ಗ್ರಾಮಕ್ಕೆ ಸಂಜೆ 6.45 ಗಂಟೆಗೆ ತಲುಪಿರುತ್ತೇವೆ. ಅಲ್ಲೇ ನಿಂತಿದ್ದ ಚಾಸಾ-2 ಮತ್ತು 3 ರವರನ್ನು ಚಾಸಾ-1 ರವರು ಕರೆದು ಅವರಿಗೆ ಬಂದ ಮಾಹಿತಿಯನ್ನು ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೋರಿ ನೋಟಿಸನ್ನು ಜಾರಿ ಮಾಡಿರುತ್ತಾರೆ. ಅವರು ಒಪ್ಪಿದ ಮೇರೆಗೆ ಅವರನ್ನು ಕರೆದುಕೊಂಡು ಕಾಂತರಾಜ್ ಮನೆ ಹತ್ತಿರ ಹೋದಾಗ ಆತನ ಮನೆ ಸಮೀಪ ಸುಮಾರು ಸಾರ್ವಜನಿಕರು ಸೇರಿದ್ದು ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ. ಸ್ಥಳದಲ್ಲಿದ್ದ ಒಬ್ಬ ಆಸಾಮಿಯು ಒಂದು ಕೈಯಲ್ಲಿ ಚೀಲವನ್ನು ಹಿಡಿದುಕೊಂಡಿದ್ದು ಆತನೂ ಸಹ ಚೀಲವನ್ನು ಬಿಸಾಡಿ ಓಡಿ ಹೋಗಿರುತ್ತಾನೆ. ನಂತರ ಪಂಚರ ಸಮಕ್ಷಮ ಆತನು ಬಿಸಾಡಿ ಹೋಗಿದ್ದ ಚೀಲವನ್ನು ಪರಿಶೀಲಿಸಲಾಗಿ ಸದರಿ ಚೀಲವು ಮಾಸಲು ಬಣ್ಣದ ವಿಮಲ್ ಗುಟ್ಕಾ ಚೀಲವಾಗಿದ್ದು ಅದರಲ್ಲಿ ರಾಜಾವಿಸ್ಕಿ ಎಂದು ಬರೆದಿರುವ 90 ಎಂಎಲ್ ನ 137 ಪೌಚುಗಳು ಇದ್ದವು, ಅದರ ಬ್ಯಾಚ್ ನಂ 397 ಎಂದು ನಮೂದು ಇರುತ್ತದೆ. ಇದರ ಅಂದಾಜು ಬೆಲೆ ರೂ. 4,812 ಆಗಿರಬಹುದು ಎಂದು ಪಂಚರು ಅಭಿಪ್ರಾಯ ಪಟ್ಟಿರುತ್ತಾರೆ. ನಂತರ ಸದರಿ ಮದ್ಯವನ್ನು ಅದೇ ಚೀಲದಲ್ಲಿ ತುಂಬಿ ಅದರ ಬಾಯನ್ನು ದಾರದಿಂದ ಕಟ್ಟಿ ಪಿ ಎಂಬ ಅಕ್ಷರದಿಂದ ಸೀಲು ಮಾಡಿ ಕೇಸಿನ ವಿವರವನ್ನು ಒಂದು ಬಿಳಿ ಹಾಳೆಯಲ್ಲಿ ಬರೆದು ಚಾಸಾ-2 ಮತ್ತು 3 ರವರ ಸಹಿ ಪಡೆದು ಚಾಸಾ-1 ರವರೂ ಸಹ ಮಾಡಿ ಸದರಿ ಚೀಲಕ್ಕೆ ಅಂಟಿಸಿರುತ್ತಾರೆ. ಮಹಜರನ್ನು ಸಂಜೆ 7.00 ರಿಂದ 8.00 ರವರೆಗೆ ವಿದ್ಯುತ್ ದೀಪದ ಸಹಾಯದಿಂದ ಜರುಗಿಸಿರುತ್ತಾರೆ. ಮಹಜರ್ ಸಮಯದಲ್ಲಿ ನಿಪಿ-6 ರಂತೆ ಛಾಯಾಚಿತ್ರ ತೆಗೆದಿರುತ್ತಾರೆ. ಸಾಕ್ಷಿಯು ನಿಪಿ-5 ರ ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ

ಮುಮಾ-1 ಮತ್ತು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಈ ಸಂಬಂಧ ನಾನು ತನಿಖಾಧಿಕಾರಿ ಮುಂದೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀಸವಾಲುಃ ಆರೋಪಿ ಪರ ಶ್ರೀ. ಎಂ ಜಿ ವಕೀಲರಿಂದಃ</u>

ನಾವು ಹೋದಾಗ ಕತ್ತಲಾಗಿತ್ತು ಎಂದರೆ ಸರಿ. ನಾವು ಆರೋಪಿಯನ್ನು ಹಿಡಿಯಲು ಪ್ರಯತ್ನಪಟ್ಟಿರುತ್ತೇವೆ. ನಾನು ಆರೋಪಿಯನ್ನು ನೋಡದಿದ್ದರೂ ಸಹ ಪಂಚರ ಹೇಳಿಕೆ ಮೇರೆಗೆ ಆರೋಪಿಯನ್ನು ನೋಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಯಾವುದೇ ದಾಳಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ವಸ್ತುವನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಮಾ ಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ. ಮುಮಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಠಾಣಾ ಅಂಕಿ ಸಂಖ್ಯೆಗಾಗಿ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.